ರಾಜ್ಯದ ತೋಟಗಾರಿಕಾವಲಯದಲ್ಲಿ ಎ.ಡಿ.ಡಿ.ಬಿ ನೆರವಿನ ಯೋಜನೆಗಳು

3159 (3956) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ವಲಯಕ್ಕೆ NDDB ವತಿಯಿಂದ ನೀಡಲಾಗಿರುವ ಆರ್ಥಿಕ ನೆರವೆಷ್ಟು?

ಆ) ಇದರ ಸಹಾಯದಿಂದ ತೋಟಗಾರಿಕಾ ಬೆಳೆಗಾರರಿಗೆ ಸರ್ಕಾರ ರೂಪಿಸಿರುವ ಯೋಜನೆಗಳೇನು?

ಇ) ಈ ಯೋಜನೆಗಳು ಕಾರ್ಯರೂಪಕ್ಕೆ ಬಂದಿದ್ದಲ್ಲಿ ಅದರ ವಿವರಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಇಲ್ಲ.

ಆ) NDDB ಸಂಸ್ಥೆಯು ಹೊಸಕೋಟೆ ತಾಲ್ಲೂಕಿನ ಕನ್ನಮಂಗಲದಲ್ಲಿ 150.00 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೃಹತ್ ಪ್ರಮಾಣದ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಟರ್ಮಿನಲ್ ಮತ್ತಿತರೆ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದು ರಾಜ್ಯ ಸರ್ಕಾರವು ಪ್ರೋತ್ಸಾಹ ನೀಡುತ್ತಲಿದೆ. ಇದರಿಂದ ರಾಜಜ್ಯದ ತೋಟಗಾರಿಕೆ ಬೆಳಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ದೊರೆಯುವುದೆಂದು ಮನಗಾಣಲಾಗಿದೆ.

ಇ) ಯೋಜನೆಯು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲವಾದ್ದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಏತ ನೀರಾವರಿ ಕಾಮಗಾರಿಗಳು

3160 (3957) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಏತ ನೀರಾವರಿ ಕಾಮಗಾರಿಗಳೆಷ್ಟು (ಕ್ಷೇತ್ರವಾರು ಮಾಹಿತಿ ನೀಡುವುದು);

ಆ) ಈ ನೀರಾವರಿ ಕಾಮಗಾರಿಗಳು ಯಾವ ಹಂತದಲ್ಲಿವೆ; (ಕ್ಷೇತ್ರವಾರು ಮಾಹಿತಿ ನೀಡುವುದು);

ಇ) ಈ ನೀರಾವರಿ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕಾದ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ;

ಈ) ಹಾಗಿದ್ದಲ್ಲಿ, ಈ ಏತ ನೀರಾವರಿ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಕ್ಷೇತ್ರವಾರು ಮಾಹಿತಿ ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರಸ್ತುತ 33 ಏತ ನೀರಾವರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಕ್ಷೇತ್ರವಾರು ವಿವರಗಳು ಕೆಳಕಂಡಂತಿದೆ:–

1. ಮಂಡ್ಯ ಕ್ಷೇತ್ರ – 6 ಸಂಖ್ಯೆ
2. ಕೆರಗೋಡು ಕ್ಷೇತ್ರ – 3 ಸಂಖ್ಯೆ

3. ಕಿರುಗಾವಲು ಕ್ಷೇತ್ರ – 5 ಸಂಖ್ಯೆ
4. ಮದ್ದೂರು ಕ್ಷೇತ್ರ – 15 ಸಂಖ್ಯೆ
5. ಮಳವಳ್ಳಿ ಕ್ಷೇತ್ರ – 3 ಸಂಖ್ಯೆ
6. ಬನ್ನೂರು ಕ್ಷೇತ್ರ – 1 ಸಂಖ್ಯೆ

ಆ) ಕ್ಷೇತ್ರವಾರು ಏತ ನೀರಾವರಿ ಕಾಮಗಾರಿಗಳ ಇತ್ತೀಚಿನ ಹಂತದ ಪ್ರಗತಿಯ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧಲ್ಲಿ ನೀಡಲಾಗಿದೆ.

ಇ) ಮನಗಂಡಿದೆ.

ಈ) ಸದರಿ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, 33 ಏತ ನೀರಾವರಿ ಯೋಜನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎಂ.ಎಸ್. ಆತ್ಮಾನಂದ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3957ಕ್ಕೆ ಅನುಬಂಧ

1. ಮಂಡ್ಯ ಕ್ಷೇತ್ರ:– ಈ ಕ್ಷೇತ್ರದ ವ್ಯಾಪ್ತಿಯಲ್ಲಿ 6 ಏತ ನೀರಾವರಿ ಯೋಜನೆಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಅವುಗಳ ಹೆಸರು (1) ಕಾಗೇಹಳ್ಳದ ದೊಡ್ಡಿ, (2) ಕನ್ನಲಿ, (3) ಹುಚ್ಚಲಗೆರೆ, (4) ಕೋಣನಹಳ್ಳಿ, (5) ಯತ್ತಗದಹಳ್ಳಿ; ಮತ್ತು (6) ಮರಿಲಿಂಗನದೊಡ್ಡಿ. ಇವುಗಳ ಪೈಕಿ ಕನ್ನಲಿ, ಹುಚ್ಚಲಗೆರೆ, ಕೋಣನಹಳ್ಳಿ; ಮತ್ತು ಮರಿಲಿಂಗನದೊಡ್ಡಿ ಏತ ನೀರಾವರಿ ಯೋಜನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಕಾಗೇಹಳ್ಳದ ದೊಡ್ಡಿ ಮತ್ತು ಯತ್ತಗದಹಳ್ಳಿ ಏತ ನೀರಾವರಿ ಯೋಜನೆಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬದಿಂದ ಗುತ್ತಿಗೆದಾರರಿಗೆ ಜಮೀನನ್ನು ಹಸ್ತಾಂತರಿಸಲು ತಡವಾದ್ದರಿಂದ ಗುತ್ತಿಗೆದಾರರು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ನಿರಾಕರಿಸಿರುತ್ತಾರೆ. ಆದ್ದರಿಂದ ಸದರಿ ಗುತ್ತಿಗೆ ಕರಾರನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

2. ಕೆರೆಗೋಡು ಕ್ಷೇತ್ರ :– ಈ ಕ್ಷೇತ್ರದಲ್ಲಿ 3 ಏತ ನೀರಾವರಿ ಯೋಜನೆಗಳಾದ (1) ಕೀಲಾರ, (2) ಗಂಟೇಗೌಡನಹಳ್ಳಿ; ಮತ್ತು (3) ಡಣಾಯಕನಪುರ ಇವುಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ಕಿರುಗಾವಲು ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ 5 ಏತ ನೀರಾವರಿ ಯೋಜನೆಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಆವುಗಳ ಹೆಸರು (1) ಚಿಕ್ಕರಸಿನಕೆರೆ, (2) ಕಾಗೇಪುರ, (3) ಕೆ.ಪಿ ದೊಡ್ಡಿ, (4) ಕೆ. ಶೆಟ್ಟಿಹಳ್ಳಿ ; ಮತ್ತು (5) ಅಣ್ಣೂರು ಇವುಗಳ ಪೈಕಿ ಕೆ.ಪಿ. ದೊಡ್ಡಿ, ಕೆ. ಶೆಟ್ಟಿಹಳ್ಳಿ ಮತ್ತು ಅಣ್ಣೂರು ಏತ ನೀರಾವರಿ ಯೋಜನೆಗಳ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.

ಚಿಕ್ಕರಸಿನಕೆರೆ ಏತ ನೀರಾವರಿ ಯೋಜನೆಯ ಕಾಮಗಾರಿಯು ಪ್ರಗತಿಯಲ್ಲಿದ್ದು, ಏರು ಕೊಳವೆಗೆ ಬೇಕಾದ ಉಳಿಕೆ ಪೈಪು ಮತ್ತು ಕಾಲರುಗಳ ಟೆಂಡರ್ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅನುಮೋದನೆ ಹಂತದಲ್ಲಿದೆ.

ಕಾಗೇಪುರ ಏತ ನೀರಾವರಿ ಯೋಜನೆಯ ಗುತ್ತಿಗೆ ಕರಾರು ಆಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

4. ಮದ್ದೂರು ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಳಗೆ ನಮೂದಿಸಿರುವ 15 ಏತ ನೀರಾವರಿ ಯೋಜನೆಗಳು ಬರುತ್ತವೆ :–

(1) ಯಡವನಹಳ್ಳಿ (2) ಬೆಕ್ಕಳಲೆ (3) ಕಿರಂಗೂರು (4) ಹಳೇಹಳ್ಳಿ (5) ಮೂಡ್ಯ (6) ತಗ್ಗಹಳ್ಳಿ (7) ಬೂದಗುಪ್ಪೆ (8) ಕೆ. ಕೋಡಿಹಳ್ಳಿ (9) ಹೆಮ್ಮನಹಳ್ಳಿ (10) ಬಿದರಕೋಟೆ (11) ಆಲೂರು ದೊಡ್ಡಿ (12) ಚಿಕ್ಕೋನಹಳ್ಳಿ (13) ಬಾಣೋಜಿಪಂಥ (14) ಕಬ್ಬಾರೆ; ಮತ್ತು (15) ಶಂಕರಪುರ

ಇವುಗಳಲ್ಲಿ ಯಡವನಹಳ್ಳಿ, ಚಿಕ್ಕಳಲ್, ಹಳೇಹಳ್ಳಿ, ಬೂದಗುಪ್ಪೆ ಮತ್ತು ಬಿದರಕೋಟೆ ಈ 5 ಏತ ನೀರಾವರಿ .ಯೋಜನೆಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಪೂರ್ಣಗೊಂಡಿರುತ್ತದೆ. ಇವುಗಳಲ್ಲಿ ಬೆಕ್ಕಳಲೆ ಮತ್ತು ಬಿದರಕೋಟೆ ಯೋಜನೆಗಳ ಪರೀಕ್ಷಾರ್ಥ ಚಾಲನೆ ಮಾಡಲಾಗಿರುತ್ತದೆ. ಉಳಿಕೆ 3 ಯೋಜನೆಗಳ ಪರೀಕ್ಷಾರ್ಥ ಚಾಲನೆ ಮಾಡಬೇಕಾಗಿರುತ್ತದೆ.

8 ಸಂಖ್ಯೆಯ ಮೂಡ್ಯ, ತಗ್ಗಹಳ್ಳಿ, ಕೆ. ಕೋಡಿಹಳ್ಳಿ, ಹೆಮ್ಮನಹಳ್ಳಿ ಆಲೂರುದೊಡ್ಡಿ, ಚಿಕ್ಕೋನಹಳ್ಳಿ, ಬಾಣೋಜಿಪಂಥ ಮತ್ತು ಕಬ್ಬಾರೆ ಏತ ನೀರಾವರಿ ಯೋಜನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಕಿರಂಗೂರು ಏತ ನೀರಾವರಿ ಯೋಜನೆಯನ್ನು ಗುತ್ತಿಗೆದಾರರಿಗೆ ವಹಿಸಿದ್ದು, ಭೂಸ್ವಾಧೀನ ಅಡಚಣೆಯಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಶಂಕರಪುರ ಏತ ನೀರಾವರಿ ಯೋಜನೆಗೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

5. ಮಳವಳ್ಳಿ ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ 3 ಏತ ನೀರಾವರಿ ಯೋಜನೆಗಳು ಬರುತ್ತವೆ. ಅವುಗಳೆಂದರೆ (1) ಅಂಚೆದೊಡ್ಡಿ (2) ಮಾರೇಹಳ್ಳಿ ; ಮತ್ತು (3) ಪೂರಿಗಾಲಿ ಏತ ನೀರಾವರಿ ಯೋಜನೆಗಳು. ಇವುಗಳಲ್ಲಿ ಮಾರೇಹಳ್ಳಿ ಏತ ನೀರಾವರಿ ಯೋಜನೆಯು ಪ್ರಗತಿಯಲ್ಲಿದೆ.

ಅಂಚೆದೊಡ್ಡಿ ಯೋಜನೆಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಪೂರಿಗಾಲಿ ಏತ ನೀರಾವರಿ ಯೋಜನೆಯ ಸರ್ವೆ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಸರ್ವೆ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಯೋಜನೆಯ ಯೋಜನಾ ವರದಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.

6. ಬನ್ನೂರು ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ ನಂಜಾಪುರ ಏತ ನೀರಾವರಿ ಯೋಜನೆಯನ್ನು ಟರ್ನ್–ಕೀ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಪ್ರೋತ್ಸಾಹಿಸಲು ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳು

3161 (3958) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ತೋಟಗಾರಿಕಾ ವಲಯದ ವ್ಯಾಪ್ತಿಯಲ್ಲಿರುವ ಕೃಷಿ ಪ್ರದೇಶದ ವಿಸ್ತೀರ್ಣವೆಷ್ಟು?

ಆ) ಕಳೆದ ಎರಡು ವರ್ಷಗಳಿಂದ ರಾಜ್ಯ ತೋಟಗಾರಿಕಾ ಇಲಾಖೆಯ ಮಾರ್ಗದರ್ಶನ ಹಾಗೂ ಪ್ರಯತ್ನದಿಂದಾಗಿ ರಾಜ್ಯದಲ್ಲಿ ತೋಟಗಾರಿಕಾ ಬೆಳೆ ಬೆಳೆಯುವ ಕೃಷಿ ಜಮೀನಿನ ಪ್ರದೇಶದ ವಿಸ್ತೀರ್ಣ ಹೆಚ್ಚಳವಾಗಿದೆಯೇ?